ಕುಳಿತಿದ್ದಾಗ ಕಿವಿಯಲ್ಲಿ ಪಿಸುಗುಟ್ಟಿದಳು : 'ದೇವ್ ಐ ಲವ್ ಯು.' ಉಷಾಳ ಪಿಸುದನಿಯನ್ನು ಕಡಲು ಕೇಳಿಸಿಕೊಂಡಿತು. ಹತ್ತಿರದ ಬೆಸ್ತರ ಹೈಕಳು ಕೇಳಿಸಿಕೊಂಡರು. ತಿರುಗಾಡುತ್ತಿದ್ದ ಇನ್ನು ಕೆಲವು ಜೋಡಿಗಳೂ ಕೇಳಿಸಿಕೊಂಡವು. ಹಾಗಲ್ಲದಿದ್ದರೆ ಕಡಲು ಯಾಕೆ ಪ್ರತಿಧ್ವನಿಸಿ ರೇಗಿಸಬೇಕಿತ್ತು? ಆಡುತ್ತಿದ್ದ ಹೈಕಳು 'ಹೋ' ಎಂದು ಕೂಗುತ್ತಾ ಯಾಕೆ ಓಡಾಡಬೇಕಿತ್ತು? ಪ್ರೇಮಿಗಳು ನಗೆ ಬೀರಿ ಮುಂದೆ ಸಾಗುತ್ತಾ ತಾವು ಪರಸ್ಪರ ಏಕೆ ಪಿಸುಗುಟ್ಟಿಕೊಳ್ಳಬೇಕಿತ್ತು? ತಮ್ಮ ಪಿಸುಮಾತನ್ನು ಪರಿಸರ ಕೇಳಿಸಿಕೊಂಡಿತೆಂದು ಅರಿವಾಗಿ ಉಷಾಗೆ ಲಜ್ಜೆಯೋ ಲಜ್ಜೆ... ದೇವರಾಜನಿಗೆ ಹೆಮ್ಮೆಯೋ ಹೆಮ್ಮೆ...

ಪ್ರತಿಯೊಂದಕ್ಕೂ ದೇವರಾಜ ವಿರುದ್ಧವಾದದ್ದನ್ನು ಹೇಳುತ್ತಿದ್ದ. ನಿಮ್ಮಲ್ಲಿ ಸಮುದ್ರ ಐತೆ; ನಮ್ಮಲ್ಲಿ ನೀರಿಲ್ಲದ ಕೆರೆಗಳು. ನಮ್ಮ ಕಡೆ ಹನಿ ಮಳೆಗಾಗಿ ಉಡುಸ್ಲಮ್ಮನ ಹಬ್ಬ ಮಾಡ್ತೀವಿ; ನೀವು ಮಳೆಗೆ ಶಾಪ ಹಾಕ್ತೀರಿ. ಬಯಲುಸೀಮೆ ಜನರ ಎದೆಗಳೂ ಬಯಲು. ಎದೆಯಲ್ಲಿ ಏನನ್ನೂ ಬಚ್ಚಿಟ್ಟುಕೊಳ್ಳಂಗಿಲ್ಲ. ತೆರೆದಿಟ್ಟ ಪುಸ್ತಕದಂಗೆ. ಆದರೆ ಮಲೆನಾಡಿನ ಜನ ಅರ್ಥವಾಗುವುದಿಲ್ಲ. ನಿಗೂಢ. ನಿಮ್ಮ ಕಾಡುಗಳಂತೆ ನೀವು ಗೌಪ್ಯ. ಸಮುದ್ರದಂತೆ ಸಂಕೀರ್ಣ. ಆದರೆ ನೀವು ಪ್ರೇಮಿಸ್ತೀರಿ. ನಮ್ಮ ಜನ ಬರೇ ಕಾದಾಡ್ತಾರೆ. ನಿಮ್ಮ ಭಾವನೆಗಳು ನಿಮ್ಮಂತೆ ಸುಂದರ. ನಮ್ಮವು ಒರಟು. ಉಷೆ ಕಣ್ಣಲ್ಲಿ ಕಣ್ಣು ಬೆರಸಿ ಕೇಳುತ್ತಿದ್ದಳು, 'ಇದಕ್ಕೆ ನಿಮ್ಮ ಕಡೆ ಏನಂತಾರೆ' ಅಂತ ದಿನಕ್ಕೆ ಹತ್ತು ಬಾರಿ ಕೇಳದಿದ್ದರೆ ಅವಳಿಗೆ ಸಮಾಧಾನವಿರಲಿಲ್ಲ. ಸಮುದ್ರ ಕಾಡುಗಳಿಲ್ಲದ ಊರನ್ನು ಅವಳು ಕಲ್ಪಿಸಿಕೊಳ್ಳಲಾರದಷ್ಟು ಕಾರವಾರದ ಜೀವನಕ್ಕೆ ಒಗ್ಗಿಬಿಟ್ಟಿದ್ದಳು. ದೇವರಾಜು ಬಯಲುಸೀಮೆಯ ಕಥೆಗಳನ್ನು ಹೇಳಿದನೆಂದರೆ ಬೆರಗು.

★★★

ಅಂದು ಸಂಜೆ ನಾಲ್ಕೂಮೂವ್ವತ್ತಕ್ಕೆ ಕಮ್ಯುನಿಟಿ ಹಾಲ್‌ನಲ್ಲಿ ಇಡೀ ಕಾಲೇಜಿನ ವಿದ್ಯಾರ್ಥಿಗಳು ಟ್ರಿಪ್ ಹೊರಡುವ ಬಗ್ಗೆ ಚರ್ಚಿಸಲು ಸೇರಿದ್ದರು. ಗೋವಿಂದರಾವ್ ಮಾಸ್ತರು ಗೋಕರ್ಣಕ್ಕೆ ಹೋಗಿ ಬರುವ ಪೂರ್ತಿ ವಿವರಗಳನ್ನು ಮಂಡಿಸಿಯಾದ ಮೇಲೆ ಉಸ್ತುವಾರಿ ನೋಡಿಕೊಳ್ಳಲು ವಿದ್ಯಾರ್ಥಿಗಳಲ್ಲಿ ಒಬ್ಬನನ್ನು ನಾಯಕನನ್ನಾಗಿ ಆರಿಸುವಂತೆ ಸೂಚಿಸಿದರು. ಸಹಜವಾಗಿ ವಿಷ್ಣು ನಾಯಕನೇ ಆಯ್ಕೆಯಾಗಬೇಕಿತ್ತು. ಆತ ಕಾಲೇಜಿಗೇ ಬಂದದ್ದೇ ನಾಯಕನಾಗಲು. ಈ ಉಷೆ ಸುಮ್ಮನಿರಬಾರದೇ? ಇಡೀ ಸಭೆ ಮೌನದಿಂದ ಇದ್ದಾಗ ತನ್ನ ಉತ್ಕಟಭಾವವನ್ನು ಹತ್ತಿಕ್ಕಲಾರದೆ ಎದ್ದು ನಿಂತು 'ದೇವರಾಜ್ ಇರಲಿ ಸಾರ್' ಅಂದುಬಿಟ್ಟಳು. ಎಲ್ಲರಿಗೂ ದೊಡ್ಡ ಶಾಕ್. ಆದರೂ ಅವಳ ಕಿರುನಗೆಯನ್ನು ಬಯಸಿ ಕೊರಗುವ ಮಂದಿ ಅನುಮೋದಿಸಿಯೂ ಬಿಟ್ಟರು. ಗೋವಿಂದರಾವ್‌ಗೂ ಅಚ್ಚರಿ. ಏನಾಯಿತು ಈ ಹುಡುಗಿಗೆ?

ಕಾಲೇಜಿನಿಂದ ಟ್ರಿಪ್ ಹೊರಟಿದ್ದಾರೆ. ಅದಕ್ಕೆ ನನ್ನ ತಮ್ಮ ಲೀಡರ್ ಎಂದಾಗ ಸುಮಿತ್ರೆ ಉಬ್ಬಿ ಹೋದಳು. ಶ್ರೀರಾಮು ಬೆನ್ನು ತಟ್ಟಿದರು. ದೇವರಾಜನಿಗೂ ಹುಮ್ಮಸ್ಸು ಬಂದಿತ್ತು. ಉಷೆಯ ಪ್ರೋತ್ಸಾಹವಿರುವಾಗ ಏನು ಭಯ ?

ವಿಷ್ಣು ನಾಯಕನೂ ದೇವರಾಜನೂ ಮುಖಾಮುಖಿಯಾದದ್ದು ಸದಾಶಿವಗಡದಲ್ಲಿ. ತನ್ನ ಮೇಲೆ ಫ್ಲಾಶ್ ಬೆಳಕು ಚೆಲ್ಲಿದಾಗ ದೇವರಾಜ ಉಷಾಳಿಂದ ಬಿಡಿಸಿಕೊಂಡು ಹೋಗಿ ವಿಷ್ಣು ನಾಯಕನಿಗೆ ತದುಕಿ 'ಮಗನೆ ನನ್ನ ಒಪ್ಪಿಗೆ ಇಲ್ದೆ ನಮ್ಮ ಫೋಟೊ ಯಾಕೆ ತೆಗೆದೆ' ಅಂತ ಗದರಿಸಿ ಕ್ಯಾಮರದಿಂದ ರೀಲು ತೆಗೆದು ಕ್ಯಾಮರಾವನ್ನು ಬೀಸಿ ಒಗೆದ. ಅವನ ಕಡೆ ನಾಲ್ಕು ಜನ, ಇವನ ಕಡೆ ನಾಲ್ಕು ಜನ ಗುಂಪಾಗಿ, ಮಾಸ್ತರು ಬಂದು ಸಮಾಧಾನಪಡಿಸಿದ ಮೇಲೆ